

# ಮರಳು ದಿಣ್ಣೆ

ಅನು ಬೆಳ್ಳೆ

## ರಾಮಸ್ವಾಮಿಗೆ ಚಿಕಿತ್ಸೆ ನೀಡಿದ ಕಿರಣ

ಕಿರಣ ಪ್ರತ್ಯಕ್ಷವಾಗಿ ತನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ್ದಾನೆ! ತನ್ನ ಹಾಗೂ ಚಿಕ್ಕಮ್ಮನ ಸಂಬಂಧ ಹದಗೆಟ್ಟಿದೆ. ಅದೂ ಲಹರಿಯ ವಿಷಯದಲ್ಲಿ...! ಇದಕ್ಕೆ ಚಿಕ್ಕಮ್ಮನ ಮಾತುಗಳು ಕಿರಣನನ್ನು ನಂಬಿಸಿವೆ. ಕೆಲವೊಂದು ಬಾರಿ ಲಹರಿ ಅನರ್ಥಗಳನ್ನು ಸೃಷ್ಟಿಸುವಾಗ ಅವಳನ್ನು ಸಂತೈಸಿದ್ದಿದೆ, ಸಮಾಧಾನಿಸಿದ್ದಿದೆ. ಆದರೆ ವಿಪರೀತ ಅಲೆದಾಟದ ಹುಚ್ಚು ಆರಿಸಿಕೊಂಡಿದ್ದ ಲಹರಿಗೆ ಸಮುದ್ರದ ಸೆಳೆತ! ಅದಕ್ಕಿಂತಲೂ ಅಪರಿಚಿತ ಯುವಕನ ಜೊತೆಗೆ ಮರಳು ದಿಣ್ಣೆಯ ಅಲೆದಾಟ! ಜೊತೆಗೆ ನಾಡದೋಣಿಯಲ್ಲಿ ನಡು ಸಮುದ್ರದವರೆಗೂ ಹೋಗಿ ಬರುವ ಹುಚ್ಚು ಪಯಣ! ಇದೇ ಅವಳಿಗೆ ಮುಳುವಾಯಿತೆ?

'ಕಿರಣ, ನೀನು ನನ್ನ ನೇರವಾಗಿ ಕೇಳಬೇಕಾದ ಪ್ರಶ್ನೆ ಇದು. ನಿನ್ನ ಸಂದೇಹಾನ ದೂರ ಮಾಡೋದಿಕ್ಕೆ ನಾನು ತಯಾರಾಗಿದ್ದೀನಿ. ನನ್ನ ಚಿಕ್ಕಮ್ಮನಸಂಬಂಧದ ಬಗ್ಗೆ ಕೇಳಿದೆ ನೀನು. ನಿಂಗಿರೋ ಸಂಶಯ ಯಾವುದು ಹೇಳು?'

'ನಿನ್ನನ್ನು ನಾನು ಸಂದೇಹಿಸ್ತಿಲ್ಲ. ನನ್ನ ಪ್ರಶ್ನೆಗೆ ನೇರವಾಗಿ ಉತ್ತರಿಸು. ನಿನ್ನ ಚಿಕ್ಕಮ್ಮನ ಜೊತೆಗೆ ನೀನು ಹೊಂದಿಕೊಂಡಿಲ್ಲ?'

'ಅಂದ್ರೆ, ಏನು? ನಾನು ಅಬ್‌ನಾರ್ಮಲ್ ಅಂತನಾ? ಯಾವ ವಿಷಯದಲ್ಲಿ?'

'ಹೌದು, ಎಲ್ಲಾ ವಿಷಯದಲ್ಲಿಯೂ... ಆ ದಿನ ಪಾರ್ಟಿ ನಡಿತಿರೋವಾಗ ನೀನು ಆಕೆನ ನೋಡೋದಿಕ್ಕೆ ದುಡುದುಡಾಂತ ಮೆಟ್ಟಿಲೇರಿದೆ. ಆದ್ರೆ ನನ್ನ ನೋಡಿ ಹಿಂದಕ್ಕೆ ಬಂದೆ. ಇನ್ನು ಎರಡನೆಯದು ಅವರ ಕೈಯಿಂದ ಪತ್ರವನ್ನು ಕಿತ್ಕೊಂಡು ಬಂದೆ... ಇನ್ನು ಮೂರನೇದು...'

'ಸಾಕು ನಿಲ್ಸು, ನಿನ್ನ ಸಂದೇಹ ಯಾವುದೂಂತ ನಂಗೆ ಅರ್ಥವಾಯ್ತು. ನನ್ನ ಚಿಕ್ಕಮ್ಮ ನಾಲ್ಕು ಗೋಡೆಯ ನಡುವೆ ಇದ್ರೂ ಅವರ ವ್ಯವಹಾರ ಅದಕ್ಕಿಂತಲೂ ಹೆಚ್ಚಿನದು. ಒಂದು ರೀತಿಯಲ್ಲಿ ಅವರದ್ದು ಗೋಮುಖ ವ್ಯಾಘ್ರದ ವರ್ತನೆ'

'ಅಂದ್ರೆ, ಲಹರಿಯ ಕಣ್ಮರೆಯ ಹಿಂದೆ ಅವರ ಕೈವಾಡ??'

'ಇರಬಹುದು, ಯಾಕಂದ್ರೆ ಅವರ ದೂರದ ಸಂಬಂಧಿಗೆ ಮರಳು ದಿಣ್ಣೆಯಲ್ಲಿ ಒಂದು ವ್ಯವಹಾರ ಇದೆ'

'ಮರಳು ದಿಣ್ಣೆಯಲ್ಲಿ!'

'ಹೌದು ಕಿರಣ, `ಬಂಡೆ' ಅವನದೇ ಕಾರಸ್ಥಾನ'

'ಅಲ್ಲೇನು ನಡೀತಿದೆ?'

'ಅದನ್ನ ನೀನು ತಿಳ್ಕೊಳ್ಬೇಕು, ಕಿರಣ. ನಂಗೇನೂ ಗೊತ್ತಿಲ್ಲ'

ಕಿರಣ ಹೊಸದೊಂದು ಮಾಹಿತಿ ದೊರೆತಂತೆ ರಾಮಸ್ವಾಮಿಯನ್ನು ಮರೆತು ಕುತೂಹಲ ತೋರಿಸಿದ.

* * *

ಮೇನಕಾ ಹಾಗೂ ಕಿರಣನ ಮಾತುಕತೆಯ ನಡುವೆ ರಾಮಸ್ವಾಮಿ ಸೋಫಾದಿಂದ ಎದ್ದು ಕುಳಿತ. ಏಟು ಬಿದ್ದ ತಲೆಯ ಭಾಗ ನೋಯ ತೊಡಗಿತು. ಹಣೆಗೆ ಕೈ ಹಚ್ಚಿ ಕುಳಿತ. ಇಬ್ಬರೂ ಮಾತು ನಿಲ್ಲಿಸಿ ಅವನನ್ನು ವಿಚಾರಿಸಲು ಮುಂದಾದರು.

'ರಾಮಸ್ವಾಮಿ, ನೀನು ಸುಧಾರಿಸಿಕೋ. ಹಣೆಗೆ ಬಲವಾದ ಏಟು ಬಿದ್ದ ಹಾಗಿದೆ. ನಿಲ್ಲು ಪ್ರಥಮ ಚಿಕಿತ್ಸೆ ಪೆಟ್ಟಿಗೆ ತರುವೆ' ಮೇನಕಾ ಕಿರಣನಿಗೆ ಅವನ ಜವಾಬ್ದಾರಿಯನ್ನು